## ಕಳೆದ ಸಂಚಿಕೆಯಲ್ಲಿ



ಪಾಲ್‌ನಿಂದ ಮಗುವೊಂದನ್ನು ಪಡೆಯಬೇಕೆನ್ನುವ ನೀನಾಳ ಆಸೆ ಫಲಿಸಲಿಲ್ಲ. ಐವಿಎಫ್‌ನಿಂದ ನೋವು ಅನುಭವಿಸಬೇಕಾಯಿತು ಹಾಗೂ ದುಡ್ಡು ಕಳೆದುಕೊಳ್ಳುವಂತಾಯಿತು ಅಷ್ಟೇ. ಈ ಕೊರಗಿನ ಜೊತೆಗೆ ನೀನಾಳ ವರ್ತನೆ ದಿನದಿಂದ ದಿನಕ್ಕೆ ಬದಲಾಗತೊಡಗಿತು. ದಾಂಪತ್ಯದ ಮಾಧುರ್ಯ ದೀರ್ಘ ಕಾಲ ಉಳಿಯಲಿಲ್ಲ. ಹಾಗೆಂದು ನೀನಾಳ ಪ್ರೇಮದ ಉತ್ಕಟತೆಯ ಬಗ್ಗೆ ಪಾಲ್‌ಗೆ ಅನುಮಾನವಿರಲಿಲ್ಲ. ತನ್ನ ಗಂಡ ಓರ್ವ ಶಿಕ್ಷಕ ಎನ್ನುವುದು ಹಾಗೂ ಅವನ ವಯಸ್ಸು ತನಗಿಂತಲೂ ಹೆಚ್ಚಾಗಿರುವುದು ನೀನಾಳನ್ನು ಬಾಧಿಸತೊಡಗಿತ್ತು. ಹೆಂಡತಿ ತನ್ನನ್ನು ಯಾರಿಗಾದರೂ ಪರಿಚಯಿಸುವಾಗ ಉದ್ಯೋಗ ಮತ್ತು ವಯಸ್ಸಿನ ಬಗ್ಗೆ ಸುಳ್ಳು ಹೇಳಿದಾಗಲೆಲ್ಲ ಪಾಲ್‌ಗೆ ಕಿರಿಕಿರಿಯಾಗುತ್ತಿತ್ತು. ಆದರೆ, ನೀನಾಳ ಪ್ರೇಮದಲ್ಲಿ ಅವನು ಅಸಹಾಯಕನಾಗಿದ್ದ. ತಾನು ಬಂದು ಉಳಿದುಕೊಂಡಿರುವ ತನ್ನ ಪತ್ನಿಯ ಮನೆ ಒಂದು 'ಮುರಿದ ಮನೆ' ಎಂದು ತಿಳಿಯಲು ಅವನಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ನೀನಾ ತನ್ನ ಪುತ್ರಿಯರಿಂದಲೇ ತೊಂದರೆ ಎದುರಿಸಬೇಕಾಗುತ್ತಿತ್ತು. ಹೀಗೆ ಕಾಲ ಸರಿಯುತ್ತಿರುವಾಗ್ಗೆ, ಒಂದು ದಿನ ಮದುವೆ ಮುರಿದುಕೊಳ್ಳುವ ಮಾತನ್ನೂ ನೀನಾ ಆಡಿದಳು.

ಕೆಲವು ಪ್ರಶ್ನೆಗಳು ನನ್ನ ಮನಸ್ಸು ಮತ್ತು ಮೆದುಳಿನಲ್ಲಿ ಆಗಾಗ ಚೀತ್ಕರಿಸುತ್ತವೆ. ಏಕೆ? ನಮ್ಮ ತಕರಾರುಗಳೇಕೆ ನಮ್ಮ ಪ್ರೀತಿಯ ಮೇಲೆ ಆಕ್ರಮಣವೆಸಗಲು ಆರಂಭಿಸಿದವು? ಅವಳೇಕೆ ನನ್ನ ಮೇಲೆ ರೇಗಲು ಆರಂಭಿಸಿದಳು? ಅವಳು ನನ್ನ ಪ್ರತಿಯೊಂದು ಕೆಲಸದಲ್ಲೂ ರೇಗುತ್ತಿದ್ದಳು. ನಾನು ಸ್ವಲ್ಪ ಹೆಚ್ಚು ಮಾತನಾಡುತ್ತೇನೆ. ಅವಳು ರೇಗುತ್ತಾ ಹೇಳುತ್ತಾಳೆ, 'ಒಂದು ಪ್ರಶ್ನೆಗೆ ಒಂದೇ ಸೆಕೆಂಡಿನಲ್ಲಿ ಉತ್ತರ ಕೊಡಬಹುದು, ಅದಕ್ಕೆ ನೀವೇಕೆ ಅರ್ಧ ಗಂಟೆ ಮಾಡುತ್ತೀರ? ಅಷ್ಟು ತಿಳಿ ಹೇಳುವ ಅಗತ್ಯವೇನಿದೆ? ಕೇಳುವವರು ಮೂರ್ಖರಂತೂ ಅಲ್ಲ.'

'ಕೇಳುವವರು ಮೂರ್ಖರಲ್ಲ, ಪ್ರತಿಯಾಗಿ ನಾನೇ ಮೂರ್ಖ. ನಾನೇ ಜಗಳಗಂಟ. ನಾನು ನಿನ್ನನ್ನು ಪ್ರೀತಿಸಿದೆನಲ್ಲ, ಮದುವೆಯಾದನಲ್ಲ. ನಾನೇ ಮೂರ್ಖ. ಎಲ್ಲವನ್ನು, ಎಲ್ಲರನ್ನೂ ಬಿಟ್ಟು ನಿನ್ನ ಬಳಿಗೆ ಬಂದೆನಲ್ಲ. ನಾನೇ ಮೂರ್ಖ' ಎಂದು ನಾನೂ ರೇಗುತ್ತಿದ್ದೆ.

ಅವಳು ಇನ್ನಷ್ಟು ರೇಗುತ್ತಿದ್ದಳು. ನಮ್ಮ ವೈವಾಹಿಕ ಜೀವನ ನಾಶದೆಡೆಗೆ ಮುಂದುವರೆಯಿತು.

ಆಗಸದಲ್ಲಿ ಸೂರ್ಯ ಪಶ್ಚಿಮದೆಡೆಗೆ ಮುಂದುವರೆಯುತ್ತಾ ಮುಳುಗಲು ಹವಣಿಸುತ್ತಿದ್ದಾನೆ. ಈಗ ಅವನು ತನ್ನ ಅಸಂಖ್ಯ ಕುಂಚಗಳಿಂದ ಆಗಸದಲ್ಲಿ ನಾನಾ ವಿಧದ ಬಣ್ಣಗಳನ್ನು ಬಳಿದು ಅದೃಶ್ಯನಾಗುತ್ತಿದ್ದಾನೆ. ಪ್ರತಿ ಕ್ಷಣವೂ ಅಂಧಕಾರ ವೃದ್ಧಿಸುತ್ತಿದೆ. ರಾತ್ರಿ ಇನ್ನಷ್ಟು ವಿಸ್ತರಿಸುವುದಕ್ಕೆ ಮೊದಲು ಇಂಟರ್ನೆಟ್‌ನಲ್ಲಿ ಮುಂದಿನ ಮಾರ್ಗವನ್ನು ನೋಡುತ್ತೇನೆ. ನಾನೊಂದು ಗೋಳಾಕಾರದ ಬೆಂಚಿನಲ್ಲಿ ಕೂತೆ. ಹೆಗಲ ಮೇಲಿನ ಬ್ಯಾಗನ್ನು ಕೆಳಗಿಟ್ಟು ನನ್ನನ್ನು ಹಗುರಗೊಳಿಸಿಕೊಂಡೆ. ನನ್ನ ಜಾಕೆಟಿನ ಜೇಬಿನಿಂದ ಐಫೋನ್ ತೆಗೆದೆ. ಮನಸ್ಸಿನಲ್ಲಿ ಸಂತುಷ್ಟತೆ ಆವರಿಸಿದೆ. ಇಂದು ನಾನು ಅದ್ಭುತವೊಂದನ್ನು ಮಾಡುತ್ತಿದ್ದೇನೆ. ನೀನಾಳ ಪುಣ್ಯತಿಥಿಯಂದು ದೇವಸ್ಥಾನಕ್ಕೆ ಪಾದಯಾತ್ರೆಯಲ್ಲಿ ಹೋಗಿ ಪುಣ್ಯವನ್ನು ಗಳಿಸುತ್ತಿದ್ದೇನೆ; ಇದರೊಂದಿಗೆ ಪ್ರೇಮಿಗಳಿಗೆ ಪ್ರೀತಿಯ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಹೀಗೆ ಯೋಚಿಸಿ ಮುಗುಳ್ನಕ್ಕೆ.

ನಾನು ನಕ್ಷೆಯನ್ನು ಕ್ಷಣಕಾಲ ಓದಿದೆ. ನಂತರ ಐಫೋನ್‌ನಲ್ಲಿ ಗೂಗಲ್ ಕ್ಲಿಕ್ ಮಾಡಿ ಮುಂದಿನ ಮಾರ್ಗವನ್ನು ನೋಡಲಾರಂಭಿಸಿದೆ. ಗೂಗಲ್‌ನಲ್ಲಿ ಮಾರ್ಗವನ್ನು ನೋಡಿ ಅರ್ಥ ಮಾಡಿಕೊಳ್ಳಲು ಸುಮಾರು ಆರೇಳು ನಿಮಿಷಗಳಾದವು. ಎದ್ದು ನೋಡಿದಾಗ ಪಕ್ಕದಲ್ಲಿದ್ದ ಬ್ಯಾಗ್ ನಾಪತ್ತೆಯಾಗಿತ್ತು. ನಾನು ಗಾಬರಿಗೊಂಡೆ. ಅತ್ತ ಇತ್ತ ನೋಡಿದೆ. ಎಲ್ಲೂ ಬ್ಯಾಗ್ ಇಲ್ಲ. ನನ್ನ ಬ್ಯಾಗ್ ಎಲ್ಲಿಗೆ ಹೋಯಿತು? ಬಳಿಯಲ್ಲಿ ಯುವತಿಯೊಬ್ಬಳು ಕಂಡಳು.

'ನೀವು ಕಪ್ಪು ಬಣ್ಣದ ಒಂದು ಶೋಲ್ಡರ್ ಬ್ಯಾಗನ್ನು ನೋಡಿದಿರ?' ಯುವತಿಯನ್ನು ಕೇಳಿದೆ.

ಅವಳು ಇಲ್ಲವೆಂಬಂತೆ ತಲೆಯಾಡಿಸಿದಳು.

'ನನ್ನ ಬ್ಯಾಗ್ ಕಾಣಿಸುತ್ತಿಲ್ಲ. ಅದು ಕಪ್ಪು ಬಣ್ಣದ ಬ್ಯಾಗ್ ಆಗಿತ್ತು'. ನಾನು ತುಂಬಾ ಹತಾಶೆಯಿಂದ ಹೇಳಿದೆ. ನಾಲ್ಕೈದು ಜನ ನನ್ನ ಅಕ್ಕಪಕ್ಕ ಬಂದು ನಿಂತರು. ನಾನು ಎಲ್ಲರಿಗೂ ಹೇಳಿದೆ, 'ನಾನಿಲ್ಲಿ ಕೂತಿದ್ದೆ, ಈ ಜಾಗದಲ್ಲಿ. ಫೋನ್‌ನಲ್ಲಿ ಮುಂದಿನ ಮಾರ್ಗವನ್ನು ನೋಡುತ್ತಿದ್ದೆ. ಆರೇಳು ನಿಮಿಷಗಳಾಗಿರಬೇಕು... ಬ್ಯಾಗ್ ನನ್ನ ಪಕ್ಕದಲ್ಲಿತ್ತು'.

'ನೀವು ನಿಮ್ಮ ಐಫೋನ್‌ನಲ್ಲಿ ಮಗ್ನರಾಗಿದ್ದಾಗ, ಯಾರೋ ನಿಮ್ಮ ಬ್ಯಾಗನ್ನು ಕದ್ದು ಒಯ್ದಿದ್ದಾನೆ' ಯುವಕನೊಬ್ಬ ನನ್ನ ಮಾತನ್ನು ತಡೆದು ಹೇಳಿದ.

'ನನ್ನ ಪಕ್ಕದಲ್ಲಿಂದ ಯಾರು, ಹೇಗೆ ನನ್ನ ಬ್ಯಾಗನ್ನು ಕದಿಯಲು ಸಾಧ್ಯ?' ನಾನು ಆಶ್ಚರ್ಯದಿಂದ ಹೇಳಿದೆ.

'ಇವತ್ತು ಜಗತ್ತಿನ ಯಾವ ಭಾಗವೂ ಸುರಕ್ಷಿತವಲ್ಲ. ಡೆನ್ಮಾರ್ಕ್ ಸಹ ಸೇಫ್ಟಿಯಾಗಿ ಉಳಿದಿಲ್ಲ. ನೀವು ಎಚ್ಚರಿಕೆಯಿಂದಿರಬೇಕಿತ್ತು', ಯುವತಿ ಹೇಳಿದಳು.

ಅಯ್ಯೋ ದೇವರೇ! ನನ್ನ ತೀರ್ಥಯಾತ್ರೆಯ ಸಂಗಾತಿಯಾಗಿದ್ದ ನನ್ನ ಬ್ಯಾಗ್ ಮಾಯವಾಯಿತು. ಬ್ಯಾಗ್‌ನಲ್ಲಿ ನನ್ನ ವಸ್ತುಗಳೆಲ್ಲವೂ ಇದ್ದವು. ದೀರ್ಘ ಪ್ರಯಾಣದಲ್ಲಿ ನನ್ನ ಜೇಬುಗಳು ಹಗುರವಾಗಿರಲೆಂದು ನನ್ನ ವ್ಯಾಲೆಟನ್ನು ಸಹ ಬ್ಯಾಗಿನೊಳಗಿಟ್ಟಿದ್ದೆ. ವ್ಯಾಲೆಟಿನಲ್ಲಿ ಎರಡು ಸಾವಿರ ಕ್ರೋನರ್‌ಗಳಿದ್ದವು. ನನ್ನ ಕ್ರೆಡಿಟ್ ಕಾರ್ಡ್‌ಗಳಿದ್ದವು. ನನ್ನ ಡ್ರೈವಿಂಗ್ ಲೈಸೆನ್ಸ್ ಇತ್ತು. ನನ್ನ ಬ್ಯಾಗಿನಲ್ಲಿ ಇನ್ನೇನಿತ್ತು ಎಂದು ನೆನಪು ಮಾಡಿಕೊಳ್ಳಲಾರಂಭಿಸಿದೆ. ತಿನ್ನುವ ಪದಾರ್ಥಗಳು, ಪಾನೀಯಗಳು. ಟಾರ್ಚ್, ಶಾಲು, ನನ್ನ ಐಫೋನಿನ ಚಾರ್ಜರ್, ನನ್ನ ಮನೆಯ ಬೀಗದ ಕೈಗಳು, ನನ್ನ ರೈನ್‌ಕೋಟ್, ರೆಸ್ಟೋರೆಂಟಿನಲ್ಲಿ ಕಟ್ಟಿಸಿಕೊಂಡಿದ್ದ ಸ್ಯಾಂಡ್‌ವಿಚ್ ಎಲ್ಲವೂ ಮಾಯವಾಗಿತ್ತು. ನಾನು ಭಾರತದಿಂದ ನನಗಾಗಿ ಖರೀದಿಸಿ ತಂದಿದ್ದ ಶೇರ್‌ವಾನಿ ಡ್ರೆಸ್ ಬ್ಯಾಗಿನಲ್ಲಿತ್ತು; ಖಾದಿ ಸಿಲ್ಕ್‌ನ ಕುರ್ತಾ ಪೈಜಾಮ ಮತ್ತು ಮಫ್ಲರ್ ಸಹ ಇತ್ತು. ನೀನಾಳೇ ಈ ಉಡುಪುಗಳನ್ನು ನನಗಾಗಿ ಖರೀದಿಸಿದ್ದಳು. ಅವಳ ಪುಣ್ಯತಿಥಿಯಂದು ಅದೇ ಉಡುಪುಗಳನ್ನು ಧರಿಸುವುದಾಗಿ ಯೋಚಿಸಿದ್ದೆ. ಆದರೆ ಈಗೇನು ಮಾಡುವುದು? ನಾನು ತುಂಬಾ ವ್ಯಾಕುಲನಾದೆ.

'ನೀವು ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡಿ' ಯುವಕನೊಬ್ಬ ಹೇಳಿದ. 'ಪೊಲೀಸ್ ಸ್ಟೇಷನ್‌ಗೆ ಇಲ್ಲಿಂದ ಐದು ನಿಮಿಷ ದೂರವಾಗುತ್ತೆ ಅಷ್ಟೆ.'

'ಮೊದಲು ನಿಮ್ಮ ಕ್ರೆಡಿಟ್ ಕಾರ್ಡ್ ಬ್ಲಾಕ್ ಮಾಡಿಸಿ' ಮತ್ತೊಬ್ಬ ಸಲಹೆಯಿತ್ತ.

ನಾನು ನನ್ನ ತಲೆಹಿಡಿದು ಕೂತೆ. ನನಗೆ ಬೇರೆಯವರ ಬಗ್ಗೆಯಲ್ಲ, ನನ್ನ ಬಗ್ಗೆಯೇ ಸಿಟ್ಟು ಬರುತ್ತಿದೆ. ನಾನೆಷ್ಟು ಬೇಜವಾಬ್ದಾರಿ ಮನುಷ್ಯನಾದೆ! ಯಾರೋ ಒಬ್ಬ ನನ್ನ ಪಕ್ಕದಿಂದ ನನ್ನ ಬ್ಯಾಗ್ ಅಪಹರಿಸಿದ. ಆದರೆ ನನಗಿದರ ಸುಳಿವೇ ಸಿಗಲಿಲ್ಲ. ನೀವು ಸದಾ ನಿಮ್ಮ ಐಫೋನ್ ಮತ್ತು ಇಂಟರ್ನೆಟ್‌ನಲ್ಲಿಯೇ ಮುಳುಗಿರ್ತೀರ, ನಿಮ್ಮ ಅಕ್ಕಪಕ್ಕ ಏನಾಗ್ತಿದೆ ಎಂಬುದು ಸಹ ನಿಮಗೆ ಜ್ಞಾನವಿರುವುದಿಲ್ಲ ಎಂದು ನೀನಾ ಸಹ ರೇಗುತ್ತಿದ್ದಳು.

ನಾವು ಬಾರ್ಸಿಲೋನಾಗೆ (ಸ್ಪೇನ್) ಟೂರ್ ಹೋಗಿದ್ದೆವು. ಹಾಪ್–ಆನ್ ಮತ್ತು ಹಾಪ್–ಆಫ್ ಬಸ್‌ನಲ್ಲಿ ಸಿಟಿ ಟೂರ್ ಮಾಡುತ್ತಿದ್ದೆವು. ನಾನು ಐಫೋನ್‌ನಲ್ಲಿ ಇಂಟರ್ನೆಟ್ ಹಾಕಿ ಬಾರ್ಸಿಲೋನಾದ ಇನ್ನಿತರ ಟೂರಿಸ್ಟ್ ಆಕರ್ಷಣೆಗಳನ್ನು ಹುಡುಕುತ್ತಿದ್ದೆ. ಫೋಟೊ ಸಹ ಹೊಡೆಯುತ್ತಿದ್ದೆ. ನೀನಾ ನನ್ನ ಪಕ್ಕದಲ್ಲಿ ಮೌನಿಯಾಗಿ ಕೂತಿದ್ದಳು. ಬಹುಶಃ ನನ್ನೆಲ್ಲಾ ಗಮನ ಫೋಟೊಗ್ರಫಿ ಮತ್ತು ಐಫೋನ್‌ನ ಮೇಲಿತ್ತು. ನೀನಾ ರೇಗಿ ನಡುವೆಯೇ